ಊ) ಗುಲ್ಬರ್ಗಾ ಮಹಾನಗರದಲ್ಲಿ ಈ ರೀತಿಯ ದರೋಡೆ, ಕಳ್ಳತನ, ಕೊಲೆ ಆಗದಂತೆ ಪೊಲೀಸ್ ಇಲಾಖೆ ಯಾವ ಮುನ್ನೆಚ್ಚರಿಗೆ ಕೈಗೊಂಡಿದೆ (ಸಂಪೂರ್ಣ ವಿವರ ನೀಡುವುದು)?

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):-**

ಅ) ಬಂದಿದೆ. ದಿನಾಂಕ 14-12-2003 ರಂದು ಶ್ರೀ ಸೋಮಶೇಖರ ತಂದೆ ಗುಂಡಪ್ಪ ತೆಂಗಳಿ ಸಾ: ದೋದುತಾಯಿ ನಗರ ಗುಲ್ಬರ್ಗಾ ನಗರ ಇವರು ಕೊಟ್ಟ ದೂರಿನ ಮೇರೆಗೆ ಗುಲ್ಬರ್ಗಾ ನಗರದ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 185/2003 ಕಲಂ 396 ಐಪಿಸಿ ರನ್ನು ದಾಖಲಿಸಲಾಗಿರುತ್ತದೆ.

ಆ) ಸದರಿ ಗುನ್ನೆ ಆರೋಪಿತರನ್ನು ಪತ್ತೆ ಹಚ್ಚಲು ನಾಲ್ಕು ಪ್ರತ್ಯೇಕ ಅಪರಾಧ ಪತ್ತೆ ದಳವನ್ನು ರಚಿಸಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ರಾಜ್ಯದ ದರೋಡೆ ಅಪರಾಧಿಯನ್ನು ವಿಚಾರಣೆಗೆ ಒಳಪಡಿಸಲು ಯಾವುದೇ ಉಪಯುಕ್ತ ಮಾಹಿತಿ ದೊರೆತಿರುವುದಿಲ್ಲ. ಆದರೂ ಕೂಡ ಪತ್ತೆ ಕಾರ್ಯ ಚಾರಿಯಲ್ಲಿರುತ್ತದೆ.

ಇ&ಈ&ಉ) ಇಂತಹ ಪ್ರಕರಣಗಳಲ್ಲಿ ಪರಿಹಾರಧನ ನೀಡಲು ಅವಕಾಶ ಇರುವುದಿಲ್ಲ.

ಊ) ದರೋಡೆ, ಕಳ್ಳತನ, ಕೊಲೆಯಾಗದಂತೆ ನೋಡಿಕೊಳ್ಳಲು ಪ್ರತ್ಯೇಕ ಅಪರಾಧ ದಳವನ್ನು ಪ್ರತಿ ಪೊಲೀಸ್ ಠಾಣೆಯಲ್ಲಿ ರಚಿಸಲಾಗಿದೆ. ಜಿಲ್ಲೆಯಾದಂತ ರಾತ್ರಿ ಮತ್ತು ಹಗಲು ಗಸ್ತಿನ ಕೆಲಸವನ್ನು ಚುರುಕುಗೊಳಿಸಲಾಗಿದೆ. ಜಿಲ್ಲೆಯ ಗಡಿ ಭಾಗದಲ್ಲಿ ಹಾಗೂ ಗುಲ್ಬರ್ಗಾ ನಗರದ ಹೊರ ವಲಯಗಳಲ್ಲಿ ನಾಕಾ ಬಂದಿಗಳನ್ನು ಮಾಡಲಾಗುತ್ತಿದೆ. ಹಾಗೂ ರಾತ್ರಿ ಹೊತ್ತಿನಲ್ಲಿ ರಾಜ್ಯ ಹೆದ್ದಾರಿಗಳಲ್ಲಿ ರೋಡ್ ಪೆಟ್ರೋಲಿಂಗ್ ನಡೆಸಲಾಗುತ್ತದೆ. ಶಸ್ತ್ರಸಜ್ಜಿತ ಪೊಲೀಸ್ ಎಸ್ಕಾರ್ಟ್‌ನ್ನು ರಾತ್ರಿ ಬಸ್ಸುಗಳಲ್ಲಿ ಏರ್ಪಡಿಸಲಾಗಿದೆ.

**2278(2058) ಶ್ರೀ ಚರಂತಿ ಮಠ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟ):**-ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮಾಸಾಶನ ಪಡೆಯುತ್ತಿರುವ ವಿವಿಧ ಕ್ಷೇತ್ರಗಳ ಕಲಾವಿದರುಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು)

ಆ) ಬಾಗಲಕೋಟೆ ಜಿಲ್ಲೆಯಿಂದ ಮಾಸಾಶನ ಮಂಜೂರಾತಿ ಕೋರಿ ಬಂದ ಎಷ್ಟು ಅರ್ಜಿಗಳು ಬಾಕಿ ಇವೆ;

ಇ) ಅವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು;

ಈ) ಮಾಸಾಶನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಇದ್ದಲ್ಲಿ ಅದರ ವಿವರಗಳೇನು;

**ಶ್ರೀ ಧರ್ಮಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಗಳು):-**

ಅ) ಒಟ್ಟು 11,415 ಕಲಾವಿದರು ಮಾಸಾಶನ ಪಡೆಯುತ್ತಿದ್ದಾರೆ.

(ಅನುಬಂಧದಲ್ಲಿ ವಿವರ ನೀಡಿದೆ)

ಆ) ಬಾಗಲಕೋಟೆ ಜಿಲ್ಲೆಯ 111 ಜನ ಸಾಹಿತಿ: ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಗೌರವಧನವನ್ನು ಮಂಜೂರು ಮಾಡಲು ಹೆಚ್ಚುವರಿ ಹಣವನ್ನು ಮುಂದಿನ ವರ್ಷದ ಆಯವ್ಯಯದಲ್ಲಿ ಸೇರಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದು ಅನುದಾನ ಬಿಡುಗಡೆಯಾಗುತ್ತಿದ್ದಂತೆಯೇ ಈ ಕಲಾವಿದರುಗಳಿಗೆ ಮಾಸಾಶನವನ್ನು ಮಂಜೂರು ಮಾಡಲಾಗುವುದು.

ಈ) ಈ ಸಾಹಿತಿ ಕಲಾವಿದರಿಗೆ ನೀಡುತ್ತಿದ್ದ ಗೌರವಧನ: ಮಾಸಾಶನ 1-11-2002ರಿಂದ 250 ರೂಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗಿದೆ. ಈಗ ಪುನ: ಮಾಸಾಶನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2058ರ ಅನುಬಂಧ ಕಷ್ಟಪರಿಸ್ಥಿಯಲ್ಲಿರುವ ಸಾಹಿತಿ: ಕಲಾವಿದರುಗಳಿಗೆ ಮಾಸಾಶನ ಮಂಜೂರಾತಿಯ ಜಿಲ್ಲಾವಾರು ವಿವರ.**

| ಕ್ರಮ ಸಂಖ್ಯೆ | ಜಿಲ್ಲೆಗಳು | ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 1578 |
| 2. | ಬೆಂಗಳೂರು ಗ್ರಾಮಾಂತರ | 610 |
| 3. | ಕೋಲಾರ | 467 |
| 4. | ತುಮಕೂರು | 808 |
| 5. | ಶಿವಮೊಗ್ಗ | 263 |
| 6. | ಚಿತ್ರದುರ್ಗ | 478 |
| 7. | ದಾವಣಗೆರೆ | 65 |
| 8. | ಮೈಸೂರು | 989 |
| 9. | ಮಂಡ್ಯ | 534 |
| 10. | ಹಾಸನ | 237 |
| 11. | ಚಿಕ್ಕಮಗಳೂರು | 104 |
| 12. | ಮಂಗಳೂರು(ದ.ಕ) | 327 |

| ಕ್ರಮ ಸಂಖ್ಯೆ | ಜಿಲ್ಲೆಗಳು | ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ |
|---|---|---|
| 13. | ಉಡುಪಿ | 16 |
| 14. | ಚಾಮರಾಜನಗರ | 72 |
| 15. | ಮಡಿಕೇರಿ | 19 |
| 16. | ಗುಲ್ಬರ್ಗಾ | 210 |
| 17. | ಬಿಜಾಪುರ | 1049 |
| 18. | ಬಾಗಲಕೋಟೆ | 566 |
| 19. | ಬಳ್ಳಾರಿ | 546 |
| 20. | ರಾಯಚೂರು | 283 |
| 21. | ಧಾರವಾಡ | 819 |
| 22. | ಗದಗ | 105 |
| 23. | ಹಾವೇರಿ | 57 |
| 24. | ಉತ್ತರಕನ್ನಡ (ಕಾರವಾರ) | 190 |
| 25. | ಕೊಪ್ಪಳ | 63 |
| 26. | ಬೆಳಗಾಂ | 882 |
| 27. | ಬೀದರ್ | 145 |
| 28. | ಹೊರನಾಡು | 24 |
| | ಒಟ್ಟು | **11,415** |

**2279(2059) ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಲಕೋಟೆ):–** ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳ ಮೂಲಕ ನೀರಾವರಿ ಗೊಳಪಡುವ ಪ್ರದೇಶದ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಇ) ಈ ಕೆರೆಗಳ ಹೊಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ;

ಈ) ಹೌದಾದಲ್ಲಿ, ಎಷ್ಟು ಕೆರೆಗಳ ಹೂಳನ್ನು ಎತ್ತಲಾಗಿದೆ;

ಉ) ಉಳಿದ ಕೆರೆಗಳ ಹೂಳೆತ್ತುವ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದಿತ;

**ಶ್ರೀ ಮಲ್ಲಿಕಾರ್ಜುನ ಖರ್ಗೆ:– (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):–**